





ಕೊಡುತ್ತಾ ಕಣ್ಣಲ್ಲೇ ಮೋಡಿ ಮಾಡುವಂತಹ ಆಂಗಿಕ ಅಭಿನಯ ಇದಕ್ಕೆ ಕರಗತ.

ಪ್ರಪಂಚದ ಪಕ್ಷಿಲೋಕದಲ್ಲಿ ಬಾವಲಿಯಂತೆ ತಲೆ ಕೆಳಗಾಗಿ ನೇತಾಡಿಕೊಂಡು ನಿದ್ರಿಸುವ ಏಕಮಾತ್ರ ಗಿಳಿ ಇದು. ಹೀಗಾಗಿ ಇದನ್ನು 'ಹ್ಯಾಂಗಿಂಗ್ ಪ್ಯಾರೆಟ್' ಎಂದೇ ಗುರುತಿಸುತ್ತಾರೆ. ಗಂಡು ಗಿಳಿಗಳಿಗೆ ಕುತ್ತಿಗೆಯ ಬಳಿ ತಿಳಿ ನೀಲಿಯ ಚಿಕ್ಕ ಪಟ್ಟಿ ಇರುತ್ತದೆ. ಕಾಲಿನಲ್ಲಿ ಮೊದಲನೆಯ ಹಾಗೂ ಕೊನೆಯ ಎರಡು ಬೆರಳುಗಳು ಹಿಮ್ಮುಖವಾಗಿ ಇರುತ್ತವೆ. ಕೊಂಬೆಗಳ ಮೇಲೆ ಕುಳಿತುಕೊಳ್ಳಲು ಮರದ ತೊಗಟೆ ಹಿಡಿದು ಹತ್ತಲು, ಇಳಿಯಲು ಅದರ ಈ ಕಾಲು ಬೆರಳುಗಳ ರಚನೆ ತುಂಬಾ ಸಹಕಾರಿ.

ಇದರ ಕೊಕ್ಕು ಮುಂದುಗಡೆ ಹುಲಿ ಉಗುರಿನಷ್ಟೆ ಹರಿತವಾಗಿಯೂ, ಚೂಪಾಗಿಯೂ ಇದೆ. ಚರ್ಮ ಹರಿದು ಗಾಯವಾಗುವಂತೆ ಜೋರಾಗಿ ಕಚ್ಚುತ್ತದೆ. ಕೊಂಬೆಯಿಂದ ಕೊಂಬೆಗೆ ಹತ್ತುವುದಕ್ಕೆ ಕಾಲಿನ ಜೊತೆಗೆ ಕೊಕ್ಕನ್ನು ಉಪಯೋಗಿಸುವುದರಿಂದ, ಇವಕ್ಕೆ ಕೊಕ್ಕು ಮೂರನೇ ಕಾಲೆಂದೇ ಹೇಳಬಹುದು. ಮರ ಹತ್ತುವಾಗ, ಇಳಿಯುವಾಗ ಕೊಕ್ಕಿನಿಂದ ಮೊದಲು ಕಾಂಡವನ್ನು ಹಿಡಿದುಕೊಂಡು ಆನಂತರ ಮುಂದಡಿಯಿಡುತ್ತವೆ. ಮನುಷ್ಯರು ಕೈಯಲ್ಲಿ ಹಿಡಿದುಕೊಂಡು ಆಹಾರ ತಿನ್ನುವಂತೆಯೇ ಒಂದು ಕಾಲಿನಲ್ಲಿ ನಿಂತು ಇನ್ನೊಂದು ಕಾಲಿನಲ್ಲಿ ಆಹಾರ ಹಿಡಿದು ತಿನ್ನುತ್ತವೆ. ಇವು ಮರಕ್ಕೆ ಹಾರಿಬಂದು ಕೂರುವಾಗಷ್ಟೇ ತಮ್ಮ ರೆಕ್ಕೆಗಳನ್ನು ಉಪಯೋಗಿಸುತ್ತವೆ. ಇಂಪಾದ ಮೂರು ಸ್ವರದ ಸ್ಚಿ.. ಚೀ.. ಚೀ ಕೂಗು ಇದರ ಇರುವಿಕೆಯನ್ನು ಸಾರುತ್ತದೆ.

ಸಹ್ಯಾದ್ರಿಯ ಕಾಡು ಅರೆಮಲೆನಾಡು ಪ್ರದೇಶದಲ್ಲಿ ಮತ್ತು ಹಿಮಾಲಯದ ಕಾಡಿಗೆ ಸೀಮಿತವಾದ ಗಿಳಿ ಇದು. ಹೂವಿನ ರಸ ಹೀರಲು ಮತ್ತು ಅತ್ತಿ, ಆಲ, ಬಸರಿ, ಬೂರುಗ, ಮುತ್ತುಗ ಮತ್ತು ಬಾಳೆ ವನದಲ್ಲಿ ಹಣ್ಣನ್ನು ತಿನ್ನಲು ಈ ಪ್ರದೇಶಕ್ಕೆ ಬರುತ್ತವೆ. ಸಾಧಾರಣವಾಗಿ ಸಣ್ಣ ಗುಂಪುಗಳಲ್ಲಿ (5ರಿಂದ ಹತ್ತು ಮರಿಗಳು) ಮರಗಳಿಗೆ ದಾಳಿ ಇಡುತ್ತವೆ. ಮರದ ತುತ್ತ ತುದಿಯೇ ಇವುಗಳ ಕಾರ್ಯಕ್ಷೇತ್ರವಾದ್ದರಿಂದ ಸುಲಭಕ್ಕೆ ಕಣ್ಣಿಗೆ ಬೀಳುವಂಥದಲ್ಲ.

ಚಿಟ್ಟು ಗಿಳಿಗಳು ತಮ್ಮ ಆಕರ್ಷಕ ನಿಲುವು, ಸಣ್ಣ ಸಣ್ಣ ಗುಂಪುಗಳಲ್ಲಿ ವೇಗದ ಹಾರಾಟ, ಕರಾರುವಾಕ್ಕಾದ ರೆಕ್ಕೆಬಡಿತದಿಂದ ಗಮನ ಸೆಳೆಯುತ್ತವೆ. ಸದಾ ಚಟುವಟಿಕೆಯಿಂದ ಕೂಡಿದ್ದು, ಹೂವಿನ, ಹಣ್ಣಿನ ಮರಗಳಲ್ಲಿ ಮೇಲಿಂದ ಬುಡದವರೆಗೂ ತಲೆಕೆಳಗೆ ಮಾಡಿ ಲಗಾಟೆ ಹೊಡೆದು ಮಕರಂದಕ್ಕಾಗಿ ಹುಡುಕಾಟ ನಡೆಸುತ್ತವೆ. ಕೈಗೆ ದೊರಕದ್ದನ್ನು ಶತಾಯ ಗತಾಯ ದಕ್ಕಿಸಿಕೊಳ್ಳುವುದು ಇವುಗಳ ವಿಶೇಷ ಗುಣ.

ಮಳೆಗಾಲದಿಂದ ಡಿಸೆಂಬರ್ ತಿಂಗಳವರೆಗೂ ಇವುಗಳ ಕೂಗು ಹೆಚ್ಚಾಗಿ ಕೇಳಿ ಬರುತ್ತದೆ. ಜನವರಿಯಿಂದ ಜುಲೈ ತಿಂಗಳವರೆಗೂ ವಂಶಾಭಿವೃದ್ಧಿಯ ಕಾಲವಾದ್ದರಿಂದ ಹೆಚ್ಚು ಕಲರವ ಮಾಡದೆ ಮೊಟ್ಟೆ ಇಟ್ಟು, ಮರಿಗಳ ಲಾಲನೆ ಪಾಲನೆಯಲ್ಲಿ ಮಗ್ನವಾಗಿರುತ್ತವೆ. ಒಣ ಮರದ ಕಾಂಡಗಳಲ್ಲಿ ಗೊಡ್ಡಾದ, ದೊಗರಿನಿಂದ ಕೂಡಿದ, ತೂತು ಬಿದ್ದಿರುವ ಮರಗಳನ್ನೇ ಗೂಡಿಗಾಗಿ ಆಯ್ಕೆ ಮಾಡಿಕೊಳ್ಳುತ್ತವೆ. ಸಾಮಾನ್ಯವಾಗಿ ಮೂರು ಮೊಟ್ಟೆಗಳನ್ನಿಡುತ್ತವೆ. ಇದರ ವೈಜ್ಞಾನಿಕ ಹೆಸರು ಲೋರಿಕುಲುಸ್ ವೇರ್ನಲಿಸ್ **(Loriculus vernalis)**. ಆದರೆ ಹ್ಯಾಂಗಿಂಗ್ ಪ್ಯಾರೆಟ್ ಎಂದೇ ಜನಪ್ರಿಯ. ಪ್ರಪಂಚದಲ್ಲಿ 320ಕ್ಕೂ ಹೆಚ್ಚಿನ ಗಿಳಿ ಪ್ರಭೇದಗಳನ್ನು ಗುರುತಿಸಲಾಗಿದೆ.